**ದಿನಾಂಕಃ 07.06.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು: ಶ್ರೀ ಬಿ.ಪಿ., ಪ್ರತಿವಾದಿ ಪರ ವಕೀಲರಿಂದ

2. ಸರ್ವೆ ನಂಬರ್ 134/1 ಕ್ಷೇತ್ರ 24 ಎಕರೆ 16 ಗುಂಟೆ ಜಮೀನು ವಾದಿ ಕಂಬಕ್ಕನ ಗಂಡನಾದ ಈರಮಲ್ಲಯ್ಯ ಇವರಿಗೆ ಸೇರಿದ ಜಮೀನು ಎಂದರೆ ಸರಿ. ಈರಮಲ್ಲಯ್ಯ ಯಾರಿಂದ ಜಮೀನನ್ನು ಖರೀದಿ ಮಾಡಿದರು ಅಂತ ಹೇಳಬಹುದಾ ಎಂದರೆ ಸಾಕ್ಷಿಯು ಅದೇ ಗ್ರಾಮದ ಕಾಟಪ್ಪ ಎಂಬುವರಿಂದ ಎಂದು ನುಡಿಯುತ್ತಾರೆ. ಆ ರೀತಿ ಖರೀದಿ ಮಾಡುವಾಗ ಹದ್ದು ಬಸ್ತು ಕುರಿತಾಗಿ ಅಳತೆ ಮಾಡಿಸಿರುವ ಕುರಿತು ನನಗೆ ಗೊತ್ತಿಲ್ಲ, ಕಾರಣ ತುಂಬಾ ಹಿಂದೆ ಖರೀದಿ ಮಾಡಿರುತ್ತಾರೆ. ಒಟ್ಟು ಕ್ಷೇತ್ರ 24 ಎಕರೆ 16 ಗುಂಟೆ ಜಮೀನಿನ ಪೈಕಿ ಈರಮಲ್ಲಯ್ಯ ಇವರು ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುವುದು ನಿಜ, ಆದರೆ 5 ಎಕರೆ ಜಮೀನಲ್ಲ 4 ಎಕರೆ ಎಂದು ನುಡಿಯುತ್ತಾರೆ. ನಾನು ಒಟ್ಟು ಕ್ಷೇತ್ರ 24 ಎಕರೆ 16 ಗುಂಟೆ ಜಮೀನಿನ ಪೈಕಿ ಈರಮಲ್ಲಯ್ಯ ಇವರು ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪ ಇವರಿಗೆ 4 ಎಕರೆ ಜಮೀನನ್ನು ಮಾರಾಟ ಮಾಡಿರುವ ಕ್ರಯ



ಪತ್ರವನ್ನು ನಾನು ನೋಡಿರವುದಿಲ್ಲ, ಆದರೆ ನಾನು ಮಾರಾಟ ಮಾಡಿರುವ ಕುರಿತು ತಿಳಿದುಕೊಂಡಿರುತ್ತೇನೆ. ಮಾರಾಟ ಮಾಡಿರುವ ಕುರಿತು ನಾನು ಮಲ್ಲಯ್ಯ ತಂದೆ ಕಂಬಕ್ಕ ಇವರಿಂದ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ ನಾನು ಈರಮಲ್ಲಯ್ಯ ಇವರು ಸಣ್ಣಮಲ್ಲಪ್ಪ ಇವರಿಗೆ ಮಾರಾಟ ಮಾಡಿರುವ ಕ್ರಯ ಪತ್ರವನ್ನು ನೋಡಲು ಪ್ರಯತ್ನ ಪಟ್ಟಿರುತ್ತೀನಾ ಎಂದರೆ ಸಾಕ್ಷಿಯು ಇಲ್ಲ, ಆದರೆ ಊರಿನಲ್ಲಿ ಮಾತನಾಡುವ ಕುರಿತು ಕೇಳಿರುತ್ತೇನೆ ಎಂದು ನುಡಿಯುತ್ತಾರೆ.

3. ಸರ್ವೆ ನಂಬರ್ 134/1 ಕ್ಷೇತ್ರ 24 ಎಕರೆ 16 ಗುಂಟೆ ಪೈಕಿ "ಅ" ಮತ್ತು "ಬ" ಕರಾಬು ಎಷ್ಟು ಇರುತ್ತದೆ ಅಂತ ಪಹಣಿ ಪತ್ರಿಕೆಗಳನ್ನು ನೋಡಿರುವುದಿಲ್ಲ. ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪ ಇವರು ವಾದಿಯ ಗಂಡನಾದ ಈರಮಲ್ಲಯ್ಯನಿಂದ "ಅ" ಮತ್ತು "ಬ" ಕರಾಬು ಸೇರಿ ಒಟ್ಟು 5 ಎಕರೆ ಜಮೀನನ್ನು ಖರೀದಿ ಹಿಡಿಯಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೇವಲ 4 ಎಕರೆ ಮಾತ್ರ ಖರೀದಿಗೆ ಕೊಡಲಾಗಿದೆ ಎಂದು ನುಡಿಯುತ್ತಾರೆ. ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪ ಇವರು 5 ಎಕರೆ ಜಮೀನನ್ನು ಖರೀದಿಸಿರುವ ಕುರಿತು ಮುಟೇಷನ್ ಆದೇಶವಾಗಿರುತ್ತದೆ ಎಂದರೆ ಕಂದಾಯ ದಾಖಲೆಗಳ ಕುರಿತು ನನಗೆ ಗೊತ್ತಿಲ್ಲ.

4. ಅದೇ ರೀತಿ ಪ್ರತಿವಾದಿಯವರ ತಾಯಿಯಾದ ಮಲ್ಲಕ್ಕ ಇವರು ಸಣ್ಣಮಲ್ಲಪ್ಪ ತಂದೆ ಕೋಲಾಟದ ಮಲ್ಲಪ್ಪ ಇವರಿಂದ ದಿನಾಂಕ.19.02.1970 ರ ಕ್ರಯ ಪತ್ರದಂತೆ 5 ಎಕರೆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡಿರುತ್ತಾಳೆ ಎಂದರೆ ಸಾಕ್ಷಿಯು ಕ್ರಯಕ್ಕೆ ಕೊಟ್ಟಿರುವುದು ನಿಜ, ಆದರೆ 4 ಎಕರೆ ಮಾತ್ರ ಎಂದು ನುಡಿಯುತ್ತಾರೆ. ದಿನಾಂಕ.19.02.1970 ರ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ಮಲ್ಲಕ್ಕ ಇವರು ಖರೀದಿ ಮಾಡಿರುವ ಜಮೀನಿನ ಪೂರ್ವ ದಿಕ್ಕಿಗೆ ಸರ್ವೆ ನಂಬರ್ 81 ಮತ್ತು 132 ರ ಜಮೀನು ಬರುತ್ತದೆ ಎಂದು ಕ್ರಯ ಪತ್ರದಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಕ್ರಯ ಪತ್ರದಲ್ಲಿ ನಮೂದಿಸಿರುವಂತೆ ಸರ್ವೆ ನಂಬರ್ 134/1 ರ ಉಳಿದ ಜಮೀನು ಪಶ್ಚಿಮ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಕ್ರಯ ಪತ್ರದಲ್ಲಿ ನಮೂದಿಸಿರುವಂತೆ ಉತ್ತರ ದಿಕ್ಕಿಗೆ ಸರ್ವೆ ನಂಬರ್ 134 ರ ಪೈಕಿ ಭೀಮಾಚಾರಿ ತಂದೆ ಮಲ್ಲಯ್ಯ ಇವರ ಹಿಸ್ಸೆ ಜಮೀನು ಬರುತ್ತದೆ ಎಂದರೆ ಸರಿ. ಅದೇ ರೀತಿ ಕ್ರಯ ಪತ್ರದಲ್ಲಿ ನಮೂದಿಸಿರುವಂತೆ ದಕ್ಷಿಣ ದಿಕ್ಕಿಗೆ ಪಾವಗಡ-ಚಳ್ಳಕೆರೆ ಮುಖ್ಯ ರಸ್ತೆ ಬರುತ್ತದೆ ಎಂದರೆ ಸರಿ. ಪ್ರತಿವಾದಿಯವರ ತಾಯಿ ಖರೀದಿ ಮಾಡಿದ 5 ಎಕರೆ ಜಮೀನಿನಲ್ಲಿ ಒಟ್ಟು 23 ಹುಣಸೆ ಮರಗಳು ಬರುತ್ತವೆ ಎಂದರೆ ಸರಿಯಲ್ಲ. ಮಲ್ಲಕ್ಕ ಖರೀದಿ ಮಾಡಿದ 5 ಎಕರೆ ಜಮೀನಿನ ಕುರಿತು ಮುಟೇಷನ್ ಆದೇಶ ಆಗಿರುತ್ತದೆ ಎಂದರೆ ಸಾಕ್ಷಿಯು ಸಣ್ಣಮಲ್ಲಕ್ಕನಿಗೆ ಮಾರಾಟ ಮಾಡಿರುವುದು ಕೇವಲ 4 ಎಕರೆ ಅಂದ ಮೇಲೆ 5 ಎಕರೆ ಕುರಿತು ಮಲ್ಲಕ್ಕನ ಹೆಸರಿನಲ್ಲಿ



ಹೇಗೆ ಮುಟೇಷನ್ ಆದೇಶ ಮಾಡಲು ಸಾಧ್ಯ ಎಂದು ನುಡಿಯುತ್ತಾರೆ. ಮುಟೇಷನ್ ಆದೇಶಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ, ಆದರೆ ಮಲ್ಲಯ್ಯನಿಂದ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

5. ಮಲ್ಲಯ್ಯ ನನಗೆ ಹೇಳಿಕೊಟ್ಟಿರುವ ಮೇರೆಗೆ ಕೇವಲ 4 ಎಕರೆ ಜಮೀನನ್ನು ಮಾರಾಟ ಮಾಡಲಾಗಿರುತ್ತದೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭೀಮಾಚಾರಿ ಇವರಿಗೂ ಕೂಡ ಕೇವಲ 4 ಎಕರೆ 20 ಗುಂಟೆ ಜಮೀನನ್ನು ಮಾರಾಟ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಕೇವಲ 4 ಎಕರೆ ಮಾತ್ರ ಮಾರಾಟ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಭೀಮಾಚಾರಿಗೆ ಮಾರಾಟ ಮಾಡಿರುವ ಕ್ರಯ ಪತ್ರ ಮತ್ತು ಕಂದಾಯ ದಾಖಲೆಗಳನ್ನು ನೋಡಿರುವುದಿಲ್ಲ, ಆದರೆ ಊರಿನಲ್ಲಿ ಮಾತನಾಡುವುದನ್ನು ಕೇಳಿರುತ್ತೇನೆ. ನನಗೆ ವಯ್ಯಕ್ತಿಕವಾಗಿ ಯಾವುದೇ ಮಾಹಿತಿ ಇಲ್ಲದಿದ್ದರು ಕೂಡ ವಾದಿ ಮತ್ತು ಗ್ರಾಮಸ್ಥರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಸಣ್ಣಮಲ್ಲಪ್ಪ ಮತ್ತು ಭೀಮಾಚಾರಿ ಇವರಿಗೆ ಕೇವಲ ತಲಾ 4 ಎಕರೆಯಂತೆ

ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ತಾಯಿಯಾದ ಮಲ್ಲಕ್ಕ ಖರೀದಿ ಮಾಡಿರುವುದು ಕೇವಲ 4 ಎಕರೆ, ಆದರೆ 5 ಎಕರೆ ಕುರಿತು ಕಂದಾಯ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾಳೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ತಾರೀಖು, ತಿಂಗಳು ಮತ್ತು ವರ್ಷದಂದು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ವಾದಿ ಕಂಬಕ್ಕನ ಮಗನಾದ ಮಲ್ಲಯ್ಯನ ಮಾತುಕೇಳಿಕೊಂಡು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.